ಬೆಂಗಳೂರಿನಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

೯೦೨. ಶ್ರೀ ಎಂ.ನಾರಾಯಣಸ್ವಾಮಿ(ಬೇತಮಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರಿನ ಮಂಲ್ಲೇಶ್ವರಂನಲ್ಲಿರುವ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿರುವ ಲೇಬರ್ ವಾರ್ಡಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಯಾವ ಯಾವ ಸೌಲಭ್ಯಗಳನ್ನೂದಗಿಸಲಾಗಿದೆ:

ಆ) ಈ ಲೇಬರ್ ವಾರ್ಡಿನಲ್ಲಿ ಮಂಚಗಳ ಕೊರತೆ ಇದೆಯೇ?

ಇ) ಹಾಗಿದ್ದಲ್ಲಿ ಇಲ್ಲಿಗೆ ಬರುವ ಗರ್ಭಿಣಿ ಸ್ತ್ರೀಯರು ಮಂಚಗಳಿಲ್ಲದೆ ನೆಲದ ಮೇಲೆ ಮಲಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕೂಡಲೇ ಲೇಬರ್ ವಾರ್ಡಿಗೆ ಸಾಕಷ್ಟು ಮಂಚಗಳನ್ನು ಹಾಕಿಸಲು ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ದಿನಾಂಕ ೨೭-೬-೯೦ರ ಲಿಖಿತ ಮೂಲಕ ಉತ್ತರಿಸುವ ೧೮ನೇ ಪಟ್ಟಿಯಲ್ಲಿರುವ ೧೬ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ. ೧೧೩೦, ೯೨೧, ೮೭೨, ೧೧೫೨, ೯೧೯, ೯೬೪, ೯೬೭ ಹಾಗೂ ೬೫೦ ಇವುಗಳನ್ನು ಹೊರತುಪಡಿಸಿ, ಇನ್ನು ಉಳಿದ ೮ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಮತ್ತೆ ದಿನಾಂಕ ೨೬-೬-೯೦ ರಂದು ಪ್ರಶ್ನೋತ್ತರ ಕಾಲ ವಿಲ್ಲದಿದ್ದ ಕಾರಣ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ೧೭ನೇ ಎರಡು ಪಟ್ಟಿಗಳ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೨೭-೬-೯೦ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು

ಸೇಡಂ ತಾಲ್ಲೂಕಿನ ಆಸ್ಪತ್ರೆ ಕಟ್ಟಡದ ಕೆಲಸ ನಿಲ್ಲಿಸಿದ ಬಗ್ಗೆ

೧೧೩೦. ಶ್ರೀ ಬಸವಂತ ರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ೫೦ ಹಾಸಿಗೆ ಆಸ್ಪತ್ರೆ ಕಟ್ಟಡಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಭಾವಣಿವರೆಗೆ ನಿರ್ಮಾಣ ಮಾಡಿ ೫-೬ ವರ್ಷಗಳಿಂದ ಮುಂದಿನ ಕೆಲಸ ಆಗದೆ ನಾಗರೀಕರಿಗೆ ಈ ಆಸ್ಪತ್ರೆಯಲ್ಲಿ ಹೆಚ್ಚಿನ ಸೌಲಭ್ಯಗಳು ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಆಸ್ಪತ್ರೆಯ ಕಟ್ಟಡವನ್ನು ೫-೬ ವರ್ಷಗಳಿಂದ ನಿಲ್ಲಿಸಿದ ಗುತ್ತಿಗೆದಾರರನ್ನು ಬದಲಾಯಿಸಿ ಕಟ್ಟಡವನ್ನು ಪೂರ್ಣಗೊಳಿಸಲಿಲ್ಲವೇಕೆ?

ಇ) ಗುತ್ತಿಗೆದಾರರು ಈ ಕಟ್ಟಡವನ್ನು ನಿರ್ಮಿಸಿದ ಪಕ್ಷದಲ್ಲಿ ಸಂಬಂಧಪಟ್ಟ ಅಭಿಯಂತರ ಇಲಾಖೆ ತೀವ್ರ ಕ್ರಮ ಕೈಗೊಳ್ಳಲಿಲ್ಲವೇಕೆ?

ಈ) ಒಂದು ವೇಳೆ ಕ್ರಮ ಕೈಗೊಂಡಿದ್ದಲ್ಲಿ ಇಲ್ಲಿಯವರೆಗೆ ಈ ಕೆಲಸ ನಿಂತಿರುವುದೇಕೆ ?

ಉ) ಈ ೫-೬ ವರ್ಷಗಳಿಂದ ಕಟ್ಟಡವನ್ನು ಕಟ್ಟದ ನಿಲ್ಲಿಸಿದ ಬಗ್ಗೆ ಹೊಣೆಗಾರರು ಯಾರು ? ಹಾಗೂ ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಊ) ಕಟ್ಟಡವನ್ನು ಪೂರ್ತಿ ಮಾಡುವುದು ಯಾವಾಗ?

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿದೆ

ಆ) ಗುತ್ತಿಗೆದಾರರನ್ನು ಬದಲಾಯಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಯುತ್ತಿದೆ.

ಇ) ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಧಾರವಾಡ (ಉತ್ತರ) ಇವರು ಗುತ್ತಿಗೆಯನ್ನು ರದ್ದುಪಡಿಸಲು, ಕಾರ್ಯದರ್ಶಿ ಲೋಕೋಪಯೋಗಿ ಮತ್ತು ಕಾಡು ಮತ್ತು ವಿದ್ಯುಚ್ಛಕ್ತಿ ಇಲಾಖೆ ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡುತ್ತಾರೆ.

ಈ) ಇನ್ನೂ ಕ್ರಮ ಕೈಗೊಂಡಿಲ್ಲ.

ಉ) ಮೂಲ ಗುತ್ತಿಗೆದಾರನ್ನೇ ಹೊಣೆಗಾರ ಅವರ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯ ಅಭಿಯಂತರರು ಲೋಕೋಗಯೋಗಿ ಇಲಾಖೆಯೊಡನೆ ವ್ಯವಹರಿಸುತ್ತಿರುವರು.

ಊ) ಮೂಲ ಗುತ್ತಿಗೆದಾರರನ್ನು ರದ್ದುಪಡಿಸಿ, ಬೇರೆ ಗುತ್ತಿಗೆದಾರರನ್ನು ನೆಮಿಸಿದ ಮೇಲೆ ಕ್ರಮ ಕೈಗೊಳ್ಳಲಾಗುವುದು.

ನಾಗಮಂಗಲದ ಆಸ್ಪತ್ರೆಗೆ ಎಕ್ಸ್‌ರೇ ಮಿಷನ್ ಒದಗಿಸುವ ಬಗ್ಗೆ

೧೮೯೩ ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ನಾಗಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಕ್ಸ್‌ರೇ ಕ್ಲಿನಿಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

(ಆ) ಹಾಗಿದ್ದಲ್ಲಿ. ಸದರಿ ಕ್ಲಿನಿಕ್ ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

(ಇ) ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು.

ಶ್ರೀಮತಿ ಮನೋರಮಾ ಮಾಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

(ಅ) ಬಂದಿದೆ

(ಆ) ಪರಿಶೀಲನೆಯಲ್ಲಿದೆ

(ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳ ಭರ್ತಿ

೯೧೧ ಶ್ರೀಮತಿ ಮೋಟಮ್ಮ (ಮೂಡಿಗೆರೆ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಖಾಲಿ ಇರುವ ಒಟ್ಟು ವೈದ್ಯರ ಹುದ್ದೆಗಳೆಷ್ಟು (ಪ್ರತ್ಯೇಕ) ವಿವರಗಳನ್ನು ನೀಡುವುದು.

(ಆ) ರಾಜ್ಯದಲ್ಲಿ ನಿರುದ್ಯೋಗಿ ಎಂ.ಬಿ.ಬಿ.ಎಸ್., ಪದವೀಧರರ ಸಂಖ್ಯೆ ಎಷ್ಟು ?

(ಇ) ಈ ನಿರುದ್ಯೋಗಿ ಪದವೀಧರರನ್ನು ಖಾಲಿ ಇರುವ ಹುದ್ದೆಗಳಿಗೆ ನೇಮಕ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?